ಬೆಂಗಳೂರು ಬಸವನಗುಡಿಯಲ್ಲಿರುವ ದಿ.ಅಮರಜ್ಯೋತಿ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಯಲಿ ಅವ್ಯವಹಾರ

1397 (1771) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರದ ಬಸವನಗುಡಿಯಲ್ಲಿರುವ ದಿ ಅಮರಜ್ಯೋತಿ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ, ನಲ್ಲಿ ಅವ್ಯವಹಾರವಾಗಿರುವುದು ನಿಜವೇ?

2) ಈ ಸೊಸೈಟಿಯಲ್ಲಿ ಎಷ್ಟು ಜನ ಸದಸ್ಯರಿದ್ದಾರೆ? ಈವರೆಗೂ ಎಷ್ಟು ಜನ ಸದಸ್ಯರಿಗೆ ನಿವೇಶನಗಳನ್ನು ಹಂಚಲಾಗಿದೆ? ಇಲ್ಲದಿದ್ದರೆ ಕಾರಣಗಳೇನು?

3) ಈ ಸೊಸೈಟಿಯಲ್ಲಿರುವ ಹಿರಿಯ ಸದಸ್ಯರುಗಳ ಜೇಷ್ಠತೆಯನ್ನು ಕಡೆಗಣಿಸಿ ಹೊರಗಿನ ಜನರಿಗೆ ಹೆಚ್ಚಿನ ಬೆಲೆಗೆ ನಿವೇಶನಗಳನ್ನು ನೀಡಿರುವುದು ನಿಜವೇ? (ವಿವರ ನೀಡುವುದು)

4) ಈ ಸೊಸೈಟಿಯು ಸದಸ್ಯರುಗಳಿಂದ ಬಂದಿರುವ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ನಿಜವೇ? (ವಿವರ ನೀಡುವುದು)

5) ಈ ಸೊಸೈಟಿಗೆ ಸೇರಿದ ಭೂಮಿಗಳನ್ನು ಕಾನೂನು ಬಾಹಿರವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿರುವುದು ನಿಜವೇ? ಹಾಗಿದ್ದರೆ ಈ ಆಡಳಿತ ಮಂಡಳಿಯ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

1) 2000-01ನೇ ಸಾಲಿನ ಲೆಕ್ಕಪರಿಶೋಧನೆ ವರದಿಯನ್ವಯ ಸಂಘದಲ್ಲಿ ಅವ್ಯವಹಾರವಾಗಿರುವ ಬಗ್ಗೆ ಯಾವುದೇ ಉಲ್ಲೇಖವಿಲ್ಲ.

2) ಸಂಘದಲ್ಲಿ 10,517 ಜನ ಸದಸ್ಯರಿದ್ದು, ಇವರ ಪೈಕಿ 980 ಸದಸ್ಯರಿಗೆ ನಿವೇಶನಗಳನ್ನು ಹಂಚಲಾಗಿದೆ. ಉಳಿದವರಿಗೆ ನಿವೇಶನ ಹಂಚದೇ ಇರಲು ಮುಖ್ಯ ಕಾರಣವೇನೆಂದರೆ ಸರ್ವೋಚ್ಚ ನ್ಯಾಯಾಲಯದ ಮುಂದೆ ವ್ಯಾಜ್ಯವಿರುವುದರಿಂದ ನಿವೇಶನಗಳನ್ನು ಹಂಚಿಕೆ ಮಾಡಲು ಸಾಧ್ಯವಾಗಿರುವುದಿಲ್ಲ.

3) ಇಲ್ಲ

4) ಸಂಘದಲ್ಲಿ 2000-01ನೇ ಸಾಲಿನವರೆಗೆ ಆಗಿರುವ ಲೆಕ್ಕಪರಿಶೋಧನಾ ವರದಿಯಂತೆ ಸಂಘದಲ್ಲಿ ಹಣ ದುರುಪಯೋಗದ ಪ್ರಕರಣಗಳು ವರದಿಯಾಗಿಲ್ಲ.

5) ಸಂಘವು ಜಮೀನನ್ನು ಕಾನೂನುಬಾಹಿರವಾಗಿ ಹಚ್ಚಿನ ಬೆಲೆಗೆ ಮಾರಾಟ ಮಾಡಿರುವ ಪ್ರಕರಣಗಳು ಇರುವುದಿಲ್ಲ. ಆದ್ದರಿಂದ ಆಡಳಿತ ಮಂಡಳಿಯ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಅಂತ್ಯೋದಯ ಅನ್ನ ಯೋಜನೆಯನ್ನು ಪೂರ್ಣ ಅನುಷ್ಠಾನಗೊಳಿಸದೆ ಇರುವುದು

1398 (1693) ಶ್ರೀ ಕೌಜಲಗಿ ಮಹಾಂತೇಶ್ ಶಿವನಾಂದ (ಬೈಲಹೊಂಗಲ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂತ್ಯೋದಯ ಅನ್ನ ಯೋಜನೆಯಲ್ಲಿ ರಾಜ್ಯದಲ್ಲಿ ಎಷ್ಟು ಫಲಾನುಭವಿಗಳಿಗೆ ಆಹಾರ ಧಾನ್ಯಗಳನ್ನು ವಿತರಣೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು);